# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ತೆರಿಗೆ ನೋಂದಾಯಿತ / ಅನೋಂದಾಯಿತ ತೆರಿಗೆದಾಯಕ ವ್ಯಕ್ತಿಗಳ ಸಂಬಂಧ ತೆರಿಗೆ ಅನುಪಾಲನೆ ಪರಿಶೀಲಿಸುವ ಹಾಗೂ ಸರ್ಕಾರವು ಇಲಾಖೆಗೆ ನಿಗಧಿಪಡಿಸಿರುವ ಗುರಿ ತಲುಪಲು ರಾಜಸ್ವ ಹಾಗೂ ಆಡಳಿತಾತ್ಮಕ ಹಿತದೃಷ್ಠಿಯಿಂದ ಹೊಸದಾಗಿ ಆಡಳಿತ, ಮನವಿ ಹಾಗೂ ಜಾರಿ ವಿಭಾಗಗಳನ್ನು ಸೃಜಿಸುವ ಸಂಬಂಧ ವಿವಿಧ ವೃಂದಗಳಲ್ಲಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಉಲ್ಲೇಖ: ವಾಣಿಜ್ಯ ತೆರಿಗೆಗಳ ಆಯುಕ್ತರ ಪ್ರಸ್ತಾವನೆ ಸಂಖ್ಯೆ: ಸಿಬ್ಬಂದಿ-3/3ಎಫ್ /ಸಿಆರ್-18/2022-23, ದಿ: 31.01.2023.

**ಪ್ರಸ್ತಾವನೆ:**

ವಾಣಿಜ್ಯ ತೆರಿಗೆಗಳ ಆಯುಕ್ತರು ಮೇಲೆ ಓದಲಾದ ಪ್ರಸ್ತಾವನೆಯಲ್ಲಿ, ವಾಣಿಜ್ಯ ತೆರಿಗೆ ಇಲಾಖೆಯು ದಿನಾಂಕ: 01-07-2017ರಿಂದ ಜಾರಿಗೆ ಬರುವಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯನ್ನು ಅನುಷ್ಠಾನಗೊಳಿಸಿದ್ದು, ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ನೊಂದಾಯಿತ ವರ್ತಕರ ಸಂಖ್ಯೆ 5.77ಲಕ್ಷ ಇದ್ದು, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಅನುಷ್ಠಾನಗೊಂಡ ನಂತರ ಸೇವಾ ವಲಯವೂ ಸಹ ಇಲಾಖೆಯ ವ್ಯಾಪ್ತಿಗೆ ಸೇರ್ಪಡೆಯಾಗಿದ್ದು, ಇದರಿಂದಾಗಿ ಪ್ರಸ್ತುತ ನೊಂದಾಯಿತ ವ್ಯಕ್ತಿಗಳ ಸಂಖ್ಯೆ ೨.೦೦ ಲಕ್ಷಕ್ಕೂ ಹೆಚ್ಚಿರುತ್ತದೆ.

ಸರಕುಗಳ ಮೇಲೆ ವಿಧಿಸುವ ತೆರಿಗೆಯ ಜೊತೆಗೆ ಸೇವೆಗಳ ಮೇಲಿನ ತೆರಿಗೆ ವಿಧಿಸುವಿಕೆಯೂ ಸಹ ಹೊಸದಾಗಿ ಇಲಾಖೆಯ ವ್ಯಾಪ್ತಿಗೆ ಬಂದಿರುವುದರಿಂದ ಇಲಾಖೆಯಲ್ಲಿ ತೆರಿಗೆದಾಯಕ ವ್ಯಕ್ತಿಗಳ ಸಂಖ್ಯೆಯು ಹೆಚ್ಚಾಗಿದ್ದು, ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿರುತ್ತದೆ.

ಅಧಿಕಾರಿಗಳು ಸರಕು ಮತ್ತು ಸೇವಾ ವಲಯಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ವೃತ್ತಿಪರತೆಯಿಂದ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಹೀಗಾಗಿ, ಹಿಂದಿನ ತೆರಿಗೆ ವ್ಯವಸ್ಥೆಯಲ್ಲಿ ಒಬ್ಬ ಅಧಿಕಾರಿಯು ಕರನಿರ್ಧರಣೆ ಮಾಡುತ್ತಿದ್ದ ಸಂಖ್ಯೆಗಳಿಗಿಂತ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅಡಿಯಲ್ಲಿ ಕಡಿಮೆ ಸಂಖ್ಯೆಯ ಕರನಿರ್ಧರಣೆಗಳನ್ನು ಮಾಡಲು ಸಾಧ್ಯವಾಗುತ್ತಿದೆ. ಅಲ್ಲದೇ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅಡಿಯಲ್ಲಿ ಸ್ವಯಂ ಕರನಿರ್ಧರಣೆ ಮಾಡಿಕೊಂಡು ಮಾಸಿಕ ನಮೂನೆಗಳನ್ನು ಸಲ್ಲಿಸಿದ ತೆರಿಗೆದಾರರ ನಮೂನೆಗಳಲ್ಲಿನ ನೈಜತೆಯನ್ನು ಪರಿಶೀಲಿಸಲು ಎಲ್ಲಾ ತೆರಿಗೆದಾರರ ದತ್ತಾಂಶಗಳನ್ನು ವಿಶ್ಲೇಷಣೆ ಮಾಡಿ, ತೆರಿಗೆ ತಪ್ಪಿಹೋಗಿರುವ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆ ಮಾಡಿ ಹೆಚ್ಚುವರಿ ತೆರಿಗೆಯನ್ನು ಸೃಜಿಸಿ, ಹೆಚ್ಚುವರಿಯಾಗಿ ಸೃಜಿಸಿದ ತೆರಿಗೆಯ ವಸೂಲಾತಿ ಕಾರ್ಯ ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ, ಹೆಚ್ಚುವರಿಯಾಗಿ ಲೆಕ್ಕಪರಿಶೋಧನೆ ಕಛೇರಿಗಳನ್ನು ಸೃಜಿಸಬೇಕಾಗಿರುತ್ತದೆ.

ಮಾಸಿಕ ನಮೂನೆಗಳನ್ನು ಸಲ್ಲಿಸದ ವರ್ತಕರ ಮೇಲೆ ಕ್ರಮ ಕೈಗೊಳ್ಳುವುದು, ತೆರಿಗೆ ತಪ್ಪಿಸಬಹುದಾದ ಸರಕುಗಳ ಮೇಲೆ ನಿರಂತರ ನಿಗಾ ವಹಿಸುವ ಸಲುವಾಗಿ ಜಾರಿ ಹಾಗೂ ಜಾಗೃತಿ ಕಾರ್ಯಗಳನ್ನು ಇಲಾಖೆಯ ಅಧಿಕಾರಿಗಳು ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಜಾರಿ ವಿಭಾಗಗಳನ್ನು ಬಲಪಡಿಸಿ, ಹೆಚ್ಚುವರಿಯಾಗಿ ಜಾರಿ ವಿಭಾಗವನ್ನು ಸೃಜಿಸಬೇಕಾಗಿರುತ್ತದೆ.

ವೃದ್ಧಿಸಿದ ತೆರಿಗೆದಾತರ ಸಂಖ್ಯೆ ಹಾಗೂ ಇಮ್ಮಡಿಗೊಂಡ ಇಲಾಖೆಯ ಕಾರ್ಯವ್ಯಾಪ್ತಿಗೆ ಪೂರಕವಾಗಿ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳ ಸಂಖ್ಯೆಯನ್ನು ಹೆಚ್ಚಿಸಿಲ್ಲದ ಕಾರಣ ಇರುವ ಅಧಿಕಾರಿ / ಸಿಬ್ಬಂದಿಗಳ ಮೇಲೆಯೇ ಹೆಚ್ಚಿನ ಜವಾಬ್ದಾರಿ ಹೊರಿಸಿರುವುದರಿಂದ, ತೆರಿಗೆ ವಂಚನೆ ಮತ್ತು ಹೆಚ್ಚುವರಿ ತೆರಿಗೆ ಸೃಜನ ಸಂಭವವಿರುವ ಪ್ರಕರಣಗಳ ಮೇಲೆ ಪರಿಣಾಮಕಾರಿಯಾಗಿ ನಿಗಾ ವಹಿಸಲು ಸಾಧ್ಯವಾಗುತ್ತಿಲ್ಲ. ಹಾಲಿ ಇರುವ ಕೆಲವು ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳಲ್ಲಿ ಸರಾಸರಿ 5 ರಿಂದ 10 ಸಾವಿರ ನೊಂದಾಯಿತ ತೆರಿಗೆದಾಯಕ ವ್ಯಕ್ತಿಗಳಿದ್ದು, ಈ ಎಲ್ಲಾ ತೆರಿಗೆದಾರರ ಮೇಲೆ ನಿರಂತರ ನಿಗಾವಹಿಸುವುದು ಪ್ರಸ್ತುತವಿರುವ ವ್ಯವಸ್ಥೆಯಿಂದ ಕಷ್ಟಸಾಧ್ಯವಾಗುತ್ತಿದೆ. ಹಾಗಾಗಿ, ಪ್ರತಿ ಸರಕು ಮತ್ತು ಸೇವಾ ತೆರಿಗೆ ಕಛೇರಿಗೆ ಸರಾಸರಿ 4 ರಿಂದ 5 ಸಾವಿರ ಕರದಾತರಿಗೆ ಸೀಮಿತಗೊಳಿಸಿ ಹಂಚಿಕೆ ಮಾಡಿ ಪ್ರಸ್ತುತವಿರುವ ಕಛೇರಿಗಳನ್ನು ವಿಭಜಿಸಿ ಹೊಸ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳನ್ನು ಸೃಜಿಸಿದಲ್ಲಿ, ಅಧಿಕಾರಿಗಳು ತಮ್ಮ ವ್ಯಾಪ್ತಿಯ ತೆರಿಗೆದಾಯಕ ವ್ಯಕ್ತಿಗಳ ಮೇಲೆ ಪರಿಣಾಮಕಾರಿಯಾಗಿ ನಿಗಾವಹಿಸಲು ಸಾಧ್ಯವಾಗಲಿದೆ. ಆದುದರಿಂದ, ಹೆಚ್ಚುವರಿಯಾಗಿ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳನ್ನು ಸೃಜಿಸಬೇಕಾಗಿರುತ್ತದೆ.

ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಕಾರ್ಯಾಧಾರಿತ ಕಛೇರಿಗಳನ್ನು ಸೃಜಿಸಲಾಗಿದ್ದು, ತೆರಿಗೆ ಸಂಗ್ರಹಣೆ ಹಾಗೂ ಅದರ ಅನುಪಾಲನೆಗೆ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಗಳನ್ನು ಸೃಜಿಸಲಾಗಿರುತ್ತದೆ. ನೊಂದಾಯಿತ ವರ್ತಕರು ಸದರಿ ಕಛೇರಿಗಳಲ್ಲಿ ಸಲ್ಲಿಸಿದ ರಿಟರ್ನ್‌ಗಳನ್ನು ಪರಿಶೀಲಿಸಿ ಹಾಗೂ ಲಭ್ಯವಿರುವ ಇತರ ಮಾಹಿತಿಯನ್ನು ಆಧರಿಸಿ, ಆದೇಶ ಹೊರಡಿಸುವ ಅಧಿಕಾರ ವ್ಯಾಪ್ತಿ ಆಡಿಟ್ ವಿಭಾಗಗಳಿಗೆ ನೀಡಲಾಗಿರುತ್ತದೆ.

ಇಲಾಖೆಯು ಪ್ರಸ್ತುತ ತೆರಿಗೆ ಆಡಳಿತಕ್ಕೆ ಸಂಪೂರ್ಣವಾಗಿ ಮಾಹಿತಿ ತಂತ್ರಜ್ಞಾನ ಆಧಾರದ ವ್ಯವಸ್ಥೆಯನ್ನು ಅವಲಂಬಿಸಿದೆ. ಈ ವ್ಯವಸ್ಥೆಯಲ್ಲಿ ತೆರಿಗೆದಾಯಕ ವ್ಯಕ್ತಿಗಳ ಮತ್ತು ವ್ಯವಹಾರದ ಬಗ್ಗೆ ಇಲಾಖೆಯಲ್ಲಿ ವಿದ್ಯುನ್ಮಾನದ ಮಾಧ್ಯಮದಲ್ಲಿ ಲಭ್ಯವಿರುವ ದತ್ತಾಂಶದ ವಿಶ್ಲೇಷಣೆ, ತೆರಿಗೆ ಅನುಪಾಲನೆಯ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ರಾಜಸ್ವದ ಹಿತದೃಷ್ಟಿಯನ್ನು ಕಾಪಾಡಲು ಅಗತ್ಯವಿದ್ದು, ಇದರಲ್ಲಿ ಅಧಿಕಾರಿಗಳದ್ದೇ ಪ್ರಮುಖ ಪಾತ್ರವಿರುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಇ-ಆಡಳಿತ ಅನುಷ್ಠಾನಗೊಳಿಸಿರುವ ಪ್ರಯುಕ್ತ ತಂತ್ರಾಂಶದಲ್ಲಿ ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಕಡಿಮೆ ತೆರಿಗೆ ಪಾವತಿಸಿರುವ ಹೆಚ್ಚು ಹೆಚ್ಚು ಪ್ರಕರಣಗಳನ್ನು ಸುಲಭವಾಗಿ ಪತ್ತೆಹಚ್ಚಲು ಸಾಧ್ಯವಾಗುತ್ತದೆ. ಆದರೆ ಪ್ರಸ್ತುತ ಇಲಾಖೆಯಲ್ಲಿ ಲಭ್ಯವಿರುವ ಅಧಿಕಾರಿಗಳಿಗೆ ಆದೇಶ ಹೊರಡಿಸಲು ನೀಡುತ್ತಿರುವ ಕಾರ್ಯಸೂಚಿಗಳ ಆಧಾರದ ಮೇಲೆ ಆದೇಶಗಳನ್ನು ಹೊರಡಿಸಿ ತೆರಿಗೆ ಸಂಗ್ರಹಿಸಲು ಅಧಿಕಾರಿ ಹಾಗೂ ಸಿಬ್ಬಂದಿಗಳ ಸಂಖ್ಯೆಯೂ ಕಡಿಮೆ ಇರುವ ಪ್ರಯುಕ್ತ ಸಕಾಲದಲ್ಲಿ ಈ ಕಾರ್ಯವನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ತೆರಿಗೆದಾಯಕ ವ್ಯಕ್ತಿಗಳ ಸಂಖ್ಯೆಗಳಿಗೆ ಅನುಗುಣವಾಗಿ ತೆರಿಗೆಯನ್ನು ಅನುಪಾಲನೆ ಮಾಡುವ ಉದ್ದೇಶಕ್ಕಾಗಿ, ಹೆಚ್ಚುವರಿಯಾಗಿ ಕಛೇರಿಗಳನ್ನು ಸೃಜಿಸಿ ಸದರಿ ಕಛೇರಿಗಳಿಗೆ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರನ್ನು ನಿಯೋಜಿಸಿದರೆ, ಮುಂಬರುವ ವರ್ಷಗಳಲ್ಲಿ ಸರ್ಕಾರವು ತನ್ನ ಅಭಿವೃದ್ಧಿಪರ ಯೋಜನೆಗಳ ಅವಶ್ಯಕತೆಗೆ ಅನುಗುಣವಾಗಿ ಇಲಾಖೆಗೆ ನಿಗಧಿಪಡಿಸುವ ಹೆಚ್ಚುವರಿ ತೆರಿಗೆ ಗುರಿಯನ್ನು ತಲುಪಲು ಸಹಕಾರಿಯಾಗುತ್ತದೆ. ಆದುದರಿಂದ, ರಾಜ್ಯದ ರಾಜಸ್ವ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಹುದ್ದೆಗಳನ್ನು, ಹಾಗೂ ವಾಣಿಜ್ಯ ತೆರಿಗೆ ಪರಿವೀಕ್ಷಕರು ಮತ್ತು ಪ್ರಥಮ ದರ್ಜೆ ಸಹಾಯಕ ವೃಂದದ ಹುದ್ದೆಗಳನ್ನು ಸೃಜಿಸಬೇಕಾಗಿರುತ್ತದೆ.

ಪ್ರಸ್ತುತ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಆರು ಆಡಳಿತ ವಿಭಾಗಗಳಿದ್ದು, ಸದರಿ ವಿಭಾಗಗಳನ್ನು ಪುನರ್ ರಚಿಸಿ, ಹೆಚ್ಚುವರಿಯಾಗಿ 05 ಆಡಳಿತ ವಿಭಾಗಗಳನ್ನು ಸೃಜಿಸಬೇಕಾಗಿರುತ್ತದೆ. ಅದಕ್ಕನುಗಣವಾಗಿ, ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ವೃಂದದ ಹುದ್ದೆಗಳನ್ನು ಸಹ ಸೃಜಿಸಬೇಕಾಗಿರುತ್ತದೆ.

ಹೊಸದಾಗಿ ಸೃಜಿಸಲ್ಪಡುವ ಆಡಳಿತ ವಿಭಾಗಗಳಿಗೆ ಪೂರಕವಾಗಿ ಮನವಿ ಕಾರ್ಯಗಳನ್ನು ನಿರ್ವಹಿಸಲು, 03 ಮನವಿ ಕಛೇರಿಗಳನ್ನು ಸೃಜಿಸಿ, ತತ್ಪರಿಣಾಮವಾಗಿ 03 ಜಂಟಿ ಆಯುಕ್ತರ ಹುದ್ದೆಯನ್ನು ಸೃಜಿಸಬೇಕಾಗಿರುತ್ತದೆ.

ಜಾರಿ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, 01 ಜಾರಿ ವಿಭಾಗವನ್ನು (ತುಮಕೂರು) ಸೃಜಿಸಿ, ತತ್ಪರಿಣಾಮವಾಗಿ 01 ಜಂಟಿ ಆಯುಕ್ತರ ಹುದ್ದೆಯನ್ನು ಸೃಜಿಸಬೇಕಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ, ವಾಣಿಜ್ಯ ತೆರಿಗೆಗಳ ಇಲಾಖೆಯ ತೆರಿಗೆ ಆಡಳಿತದ ಹಾಗೂ ರಾಜ್ಯ ರಾಜಸ್ವದ ಹಿತದೃಷ್ಟಿಯಿಂದ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಕೆಳಕಂಡಂತೆ ವಿವಿಧ ವೃಂದಗಳಲ್ಲಿ ಹೊಸ ಹುದ್ದೆಗಳನ್ನು ಸೃಜಿಸುವಂತೆ ಕೋರಲಾಗಿದೆ ಹಾಗೂ ಈ ರೀತಿ ಸೃಜನೆಯಾಗುವ ಹುದ್ದೆಗಳನ್ನು ಉಪಯೋಗಿಸಿಕೊಂಡು ಹೊಸ ವಿಭಾಗಗಳನ್ನು ಸೃಜಿಸುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ವೃಂದ | ವೇತನ ಶ್ರೇಣಿ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು | 74400 - 109600 | 9 |
| 2 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು | 67550 - 104600 | 35 |
| 3 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು | 52650 - 97100 | 86 |
| 4 | ವಾಣಿಜ್ಯ ತೆರಿಗೆ ಅಧಿಕಾರಿ | 43100 - 83900 | 97 |
| 5 | ವಾಣಿಜ್ಯ ತೆರಿಗೆ ಪರಿವೀಕ್ಷಕರು | 33450 - 62600 | 275 |
| 6 | ಪ್ರಥಮ ದರ್ಜೆ ಸಹಾಯಕರು | 27650 - 52650 | 240 |
| | ಒಟ್ಟು | | 742 |

ವಾಣಿಜ್ಯ ತೆರಿಗೆಗಳ ಆಯುಕ್ತರ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ 29 ವಾತೆಸಿ 2023, ಬೆಂಗಳೂರು, ದಿನಾಂಕ: 19.05.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಆಡಳಿತ ಮತ್ತು

ರಾಜ್ಯ ರಾಜಸ್ವ ಸ್ವೀಕೃತಿಯನ್ನು ಬಲಪಡಿಸುವ ಸಲುವಾಗಿ ಹೊಸದಾಗಿ 05 ಆಡಳಿತ ವಿಭಾಗಗಳನ್ನು (ಬೆಂಗಳೂರಿನಲ್ಲಿ 04 ವಿಭಾಗ + ತುಮಕೂರಿನಲ್ಲಿ 01 ವಿಭಾಗ), 01 ಜಾರಿ ವಿಭಾಗವನ್ನು ಮತ್ತು 03 ಮನವಿ ಕಛೇರಿಗಳನ್ನು ಪ್ರಾರಂಭಿಸಲು ಅಗತ್ಯವಿರುವ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ ವೃಂದದ ಹುದ್ದೆಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1, ಅನುಬಂಧ-2, ಅನುಬಂಧ-3 ಮತ್ತು ಅನುಬಂಧ-4 ರಂತೆ ಸೃಜಿಸಲು ಹಾಗೂ ವಾಣಿಜ್ಯ ತೆರಿಗೆ ಪರಿವೀಕ್ಷಕರ 150 ಹುದ್ದೆಗಳು ಮತ್ತು ಪ್ರಥಮ ದರ್ಜೆ ಸಹಾಯಕರ 100 ಹುದ್ದೆಗಳನ್ನು ಈ ಕೆಳಕಂಡಂತೆ ವಿವಿಧ ವೃಂದದ ಒಟ್ಟು 477 ಹುದ್ದೆಗಳನ್ನು ಹೊಸದಾಗಿ ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಹುದ್ದೆಯ ಪದನಾಮ | ವೇತನ ಶ್ರೇಣಿ | ಆರ್ಥಿಕ ಇಲಾಖೆಯು ಸೃಜಿಸಲು ಸಹಮತಿಸಿದ ಹುದ್ದೆಗಳ ಸಂಖ್ಯೆ: |
|---|---|---|---|
| 1 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು | 74400 - 109600 | 09 |
| 2 | ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು | 67550 - 104600 | 35 |
| 3 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು | 52650 - 97100 | 86 |
| 4 | ವಾಣಿಜ್ಯ ತೆರಿಗೆ ಅಧಿಕಾರಿ | 43100 - 83900 | 97 |
| 5 | ವಾಣಿಜ್ಯ ತೆರಿಗೆ ಪರಿವೀಕ್ಷಕರು | 33450 - 62600 | 150 |
| 6 | ಪ್ರಥಮ ದರ್ಜೆ ಸಹಾಯಕರು | 27650 - 52650 | 100 |
| | ಒಟ್ಟು | | 477 |

ಮುಂದುವರೆದು, ವಾಣಿಜ್ಯ ತೆರಿಗೆ ಪರಿವೀಕ್ಷಕರ ಹಾಗೂ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಕಛೇರಿವಾರು ಇಲಾಖೆಯ ಅಗತ್ಯಕ್ಕೆ ಅನುಗುಣವಾಗಿ ಇಲಾಖಾ ಹಂತದಲ್ಲಿಯೇ ಮರು ಹಂಚಿಕೆ ಮಾಡಿಕೊಳ್ಳಲು ಸಹ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆ, ವಿತ್ತೀಯ ಸುಧಾರಣೆ ಕೋಶ, ಇವರ ಹಿಂಬರಹ ಸಂಖ್ಯೆ: ಆಇ 249 ಎಫ್.ಆರ್.ಸಿ 2023 (1083059), ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ.ರಾಜಮ್ಮ
(ಎಂ.ರಾಜಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.-2 & ಸಮನ್ವಯ)
19/5/23

ಇವರಿಗೆ:

1. ಮಹಾಲೇಖಪಾಲರು (ಜಿಇಎಸ್ಎ), ಕರ್ನಾಟಕ, ಬೆಂಗಳೂರು.

2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ವಾಣಿಜ್ಯ ತೆರಿಗೆಗಳ ಆಯುಕ್ತರು, ಗಾಂಧಿನಗರ, ಬೆಂಗಳೂರು.
5. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಆಸುಇ (ಸೇವೆಗಳು), ವಿಧಾನಸೌಧ, ಬೆಂಗಳೂರು.
7. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಆಸುಇ,ವಿಧಾನ ಸೌಧ, ಬೆಂಗಳೂರು
9. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಸಿಬ್ಬಂದಿ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು
11. ಸಾಪ್ತಾಹಿಕ ರಾಜ್ಯ ಪತ್ರ, ಮಾಸಿಕ ಸಂಕಲನ.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ.
2. ಸರ್ಕಾರದ ಕಾರ್ಯದರ್ಶಿಯವರು (ಆ & ಸಂ) / ವೆಚ್ಚ ರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ) ರವರ ಆಪ್ತ ಸಹಾಯಕರು.